# ಬಾಪು ಸಂಯುಕ್ತ ಪದವಿ ಪೂರ್ವ ಕಾಲೇಜು

**ತ್ರಿವೇಣಿ ರಸ್ತೆ, ಯಶವಂತಪುರ, ಬೆಂಗಳೂರು –560022**

**ದ್ವಿತೀಯ ಪಿಯುಸಿ, ಪೂರ್ವ ಸಿದ್ಧತಾ ಪರೀಕ್ಷೆ, ಡಿಸೆಂಬರ್–2023** **ಒಟ್ಟು ಪ್ರಶ್ನೆಗಳು:58**

**ಸಮಯ:3ಗಂಟೆ15ನಿಮಿಷ** **ವಿಷಯ:ಕನ್ನಡ(01)** **ಗರಿಷ್ಟ ಅಂಕಗಳು:80**

**ಅ–ವಿಭಾಗ**

**I. ಈ ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ.** **(10X1=10)**

**1. ವಿಭೀಷಣ ಯಾರು?**

ಅ) ಭರತನ ಅಣ್ಣ ಆ) ಲಕ್ಷ್ಮಣನ ಅಣ್ಣ ಇ) ರಾವಣನ ತಮ್ಮ ಈ) ರಾಮನ ತಮ್ಮ

**2. ಗುರು ಹೇಗೆ ವರ್ತಿಸಬಾರದು?**

ಅ) ಲಘುವಾಗಿ ಆ) ದೀರ್ಘವಾಗಿ ಇ) ನೇರವಾಗಿ ಈ) ಮಕ್ಕಳಾಗಿ

**3. ಮಂದೆಗೆಳೆಸಿದ ಪಾಪಿಕೌರವನಂದು ಮುಂದಲೆವಿಡಿದು ಸೈಂಧವ**
**ಬಂದು ಬಳಿಕಾರಣ್ಯವಾಸದೊಳೆನ್ನೆಳದೊಯ್ದ – ಈ ಪದ್ಯಭಾಗದಲ್ಲಿ ಪಾಂಡವರು ಅರಣ್ಯವಾಸದಲ್ಲಿದ್ದಾಗ ದ್ರೌಪದಿಯನ್ನು ಎಳೆದುಕೊಂಡು ಹೋದವನು?**

ಅ) ದ್ರೌಪದಿಯ ವಸ್ತ್ರಾಭರಣ ಮಾಡಿದವನು ದುಶ್ಯಾಸನ

ಆ) ತುಂಬಿದ ಸಭೆಯಲ್ಲಿ ಕೀಚಕ ಕಾಲಿನಿಂದ ಒದ್ದದ್ದು

ಇ) ಕಾಡಿನಲ್ಲಿ ಹಿಡಿದು ಎಳೆದುಕೊಂಡು ಹೋದವನು ಸೈಂಧವ

ಈ) ರಾಜಸಭೆಯಲ್ಲಿ ದ್ರೌಪದಿಯನ್ನು ಅವಮಾನಿಸಿದವನು ದುರ್ಯೋಧನ

**4. ಕವಯಿತ್ರಿ ಯಾರಲ್ಲಿ ಮೊರೆಯಿಡುತ್ತಾರೆ?**

ಅ) ನಂಬಿರದ ಮನುಷ್ಯರಲ್ಲಿ ಆ)ನಂಬಿರದ ಪ್ರಾಣಿಗಳಲ್ಲಿ ಇ) ನಂಬಿರದ ಶತೃಗಳಲ್ಲಿ ಈ) ನಂಬಿರದ ದೇವರಲ್ಲಿ

**5. ಕ್ರಿಸ್ಮಸ್ ಸಂದರ್ಭದಲ್ಲಿ ಹತ್ತಿ ಯಾವ ಕೆಲಸ ಮಾಡಿದೆ?**

ಅ) ಮಂಜಿನ ಕೆಲಸ ಆ) ಬತ್ತಿಯ ಕೆಲಸ ಇ) ದೀಪದ ಕೆಲಸ ಈ) ನಕ್ಷತ್ರದ ಕೆಲಸ

**6. ಲೇಖಕಿಯ ಪತಿ ಯಾವ ತೊಂದರೆಯಿಂದ ಬಳಲಿದರು.**

ಅ) ತಲೆ ನೋವಿನಿಂದ ಆ) ಕಾಲು ನೋವಿನಿಂದ ಇ) ಹೊಟ್ಟೆ ನೋವಿನಿಂದ ಈ) ಮೇಲಿನ ಎಲ್ಲವೂಗಳು

**7. 'ಮಳೆಗಾಲ ಬಂದರೆ ಸಾಕು ಈ ಬಿಕನಾಸಿ ಹೊಳೆ ಊರಿಡೀ ತನ್ನ ಸೆರಗನ್ನೇ ಹಾಸಿಬಿಡುತ್ತದೆ ಎಷ್ಟಗಲ ಸೆರಗನ್ನು ಹಾಸಿದರೂ ಇನ್ನಷ್ಟು ದೂರಕ್ಕೆ ಹಾಸಬೇಕೆಂಬ ಚಟ ಇದಕ್ಕೆ'.-ಕೆಳಗಿನ ಯಾವ ಹೇಳಿಕೆಯನ್ನು ಸಮರ್ಥಿಸುತ್ತದೆ.**

ಅ) ಚಿನ್ನಮ್ಮನನ್ನು ಮೂದಲಿಸುವುದು ಆ) ಕುದುಪನನ್ನು ಮೂದಲಿಸುವುದು

ಇ) ಶಾಂಭವಿ ಹೊಳೆಯನ್ನು ಮೂದಲಿಸುವುದು ಈ) ಮನುಷ್ಯನ ಭಾವನೆಯನ್ನು ಮೂದಲಿಸುವುದು

**8. ನಿರೂಪಕರ ಇಕಾಲಾಜಿಸ್ಟ್ ಗೆಳೆಯ ಯಾರು?**

ಅ) ಪ್ರಕಾಶ್ ಆ) ದುರ್ಗಪ್ಪ ಇ) ವೇಲಾಯುಧ ಈ) ನಾಗರಾಜ

**9. ಜಬ್ಬಾರ್ ವೆಟರ್ನರಿ ಆಸ್ಪತ್ರೆಗೆ ಬರಲು ಕಾರಣವೇನು?**

ಅ) ಔಷಧಿ ಪಡೆಯಲು ಆ) ಮಾತ್ರೆಗಳನ್ನು ಪಡೆಯಲು

ಇ) ಮುಲಾಮು ಪಡೆಯಲು ಈ) ಇಂಜಕ್ಷನ್ ಪಡೆಯಲು

**10.“ನಮ್ಮ ಡಿಪಾರ್ಟ್‌ಮೆಂಟಿನ ಲೈನ್‌ಮನ್‌ಗಳ್ಯಾರಾದ್ರೂ ಈ ವರೆಗೆ ಸರ್ವಿಸ್ ಮುಗಿಸಿ ರಿಟೈರಾಗಿರೋದನ್ನು ನೋಡಿದ್ದೀರಾ”. – ದುರ್ಗಪ್ಪನ ಈ ಮಾತು ಏನನ್ನು ಸೂಚಿಸುತ್ತದೆ.**

ಅ) ಕೆಲಸದ ಮೇಲಿನ ಆಸಕ್ತಿಯ ಮಾತು

ಆ) ಜನರ ಬಗೆಗಿನ ವಿಶ್ವಾಸದ ಮಾತು

ಇ) ತನ್ನ ಕೆಲಸದ ಮೇಲಿನ ಕೋಪದ ಮಾತು

ಈ) ಆನೆಯ ಬಗ್ಗೆ ಹೊಂದಿದ್ದ ನಿಲುವಿನ ಮಾತು

**ಆ). ಬಿಟ್ಟ ಸ್ಥಳಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.** **(5X1=5)**

**(ಮಗು, ಚಹಾ, ಭಾಷೆ, ಶ್ರೀ ರಾಮಚಂದ್ರ, ಮನುಷ್ಯ, ಸಿಂಹಬಾಲದ ಕೋತಿ)**

11. ಕೆಂಪುಪಟ್ಟಿಗೆ ಸೇರಿದ ಪ್ರಾಣಿ ___________

12. ಬದುಕು ಯಾವುದನ್ನು ಬಿಟ್ಟು ಇರುವುದಿಲ್ಲ___________

13. ಭೂಮಿಯ ಮೇಲಿ ಮೊದಲ ವಿಜ್ಞಾನಿ___________

14. ವಸುಧೆಗೆ ಒಡೆಯನೆನಿಸಿದವನು___________

15. ಕಲಿಯುಗದ ಅಮೃತ___________

**ಇ) ಹೊಂದಿಸಿ ಬರೆಯಿರಿ.** **(5X1=5)**

| | |
|---|---|
| 16. ಶಿಲುಬೆ ಏರಿದ್ದಾನೆ | ಅ) ನಾಗಚಂದ್ರ |
| 17. ದ.ರಾ.ಬೇಂದ್ರೆ | ಆ) ಪುಲಿಗೆರೆ ಸೋಮನಾಥ |
| 18. ಜಾಲಿಯ ಮರದಂತೆ | ಇ) ಹಬ್ಬಲಿ ಅವರ ರಸಬಳ್ಳಿ |
| 19. ಕದಡಿದ ಸಲಿಲಂ ತಿಳಿವಂದದೆ | ಈ) ಬೆಳಗು ಜಾವ |
| 20. ಸೋಮೇಶ್ವರ ಶತಕ | ಉ) ಕೆ.ಎಸ್.ನಿಸಾರ್ ಅಹಮದ್ |
| | ಊ) ಪುರಂದರದಾಸರು |

## ಆ–ವಿಭಾಗ

**II. ಅ) ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ. (3X2=6)**

21. ಬಹುರೂಪಿಣಿ ವಿದ್ಯೆಯು ರಾವಣನಿಗೆ ಏನೆಂದು ಆಶ್ವಾಸನೆಯಿತ್ತಿತು?

22. ಹಡೆದ ತಂದೆ–ತಾಯಿಯರ ಮಹತ್ವವನ್ನು ತಿಳಿಸಿರಿ?

23. ಬೆಳಕು ಬೇಟೆಗಾರ ಹೇಗೆ ಬರುತ್ತಾನೆ?

24. ಕ್ರಿಸ್ಮಸ್ ಮನೆಗೆ ಏನನ್ನು ಹೊತ್ತು ತಂದಿದೆ?

**ಆ) ಯಾವುದಾದರೂ ಎರಡು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ. (2X2=4)**

25. ಹೆಂಡತಿ ಸಿದ್ಲಿಂಗಿ ಏನು ಹೇಳುತ್ತಲೇ ಇದ್ದಳು?

26. ಮಾರ್ಷನನ್ನು ಕಂಡು ಆದಿವಾಸಿಗಳು ಹೇಗೆ ಪ್ರತಿಕ್ರಿಯಿಸಿದರು?

27. ಕಥೆಯನ್ನು ಯಾವ ರಸಗಳಲ್ಲಿ ಹೇಳಲೆಂದು ಮುದ್ದಣ ಕೇಳಿದನು?

28. ಭಾವೈಕ್ಯತೆ ಈ ದೇಶದಲ್ಲಿ ಎಲ್ಲಿದೆ?

**ಇ) ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ. (3X2=6)**

29. ಕೃಷ್ಣೆಗೌಡರ ಆನೆ ಹುಟ್ಟಿ ಬೆಳೆದ ಬಗೆ ಹೇಗೆ?

30. ಕಾಡಾನೆಗಳ ಹಾವಳಿಗೆ ಪ್ರಕಾಶ್ ನೀಡಿದ ಕಾರಣಗಳೇನು?

31. ನಾಯಿ ಕಚ್ಚಿದ್ದೆಲ್ಲಿ ಎಂದಾಗ ಜಬ್ಬಾರ್ ಇರುಸು ಮುರುಸಿನಿಂದ ಏನು ಹೇಳಿದನು?

32. ನಾಗರಾಜ ದುರ್ಗಪ್ಪನ ಮೇಲೆ ಏನೆಂದು ರೇಗಿದನು?

## ಇ– ವಿಭಾಗ

**III. ಅ) ಯಾವುದಾದರೂ ಎರಡು ವಾಕ್ಯಗಳ ಸಂದರ್ಭ, ಸೂಚಿಸಿ, ಸ್ವಾರಸ್ಯ ಬರೆಯಿರಿ. (2X3=6)**

33. ಒಬ್ಬಳನಾಳಲಾರಿರಿ ಗಂಡರೋ ನೀವ್ ಭಂಡರೋ

34. ರೆಸ್ತೆಯಂಚಿನಲ್ಲಿ ಕೈಹಿಡಿದು ನಡೆಸಿದವಳು.

35. ಬಿಡುಗಡೆಗೆ ಹಾತೊರೆದು ರೈಟನ್ನೇ ರಾಂಗೆಂದಳೋ.

**ಆ) ಯಾವುದಾದರೂ ಒಂದು ವಾಕ್ಯದ ಸಂದರ್ಭ, ಸೂಚಿಸಿ, ಸ್ವಾರಸ್ಯ ಬರೆಯಿರಿ. (1X3=3)**

36. ಒಂದು ಅಂಗೈ ಅಗಲ ಬಿಟ್ಟರೆ ಮತ್ತೆಲ್ಲಿಯೂ ನೋಡಲಾರಿರಿ.

37. ವ್ಯಕ್ತಿಗಿಂತ ರಾಷ್ಟ್ರ ದೊಡ್ಡದು.

**ಇ) ಯಾವುದಾದರೂ ಒಂದು ವಾಕ್ಯದ ಸಂದರ್ಭ, ಸೂಚಿಸಿ, ಸ್ವಾರಸ್ಯ ಬರೆಯಿರಿ. (1x3=3)**

38. ಆನೆ ಸಾಕುವುದು ಎಂದರೆ ಎಲೆಕ್ಷನ್ನಿಗೆ ನಿಂತ ಹಾಗೆ .

39. ಹೊರಗಡೆಯಿಂದ ಎಕ್ಸ್‌ಪೋರ್ಟ್ ಆದವು.

## ಈ–ವಿಭಾಗ

**IV. ಅ) ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. (2X4=8)**

40. ಪ್ರಮದವನದಲ್ಲಿ ರಾವಣ-ಸೀತೆಯರ ನಡುವೆ ನಡೆದ ಸಂಭಾಷಣೆಯನ್ನು ವಿವರಿಸಿ?

41. ಬಸವಣ್ಣನ ಪ್ರಕಾರ ನೈಜಭಕ್ತಿಯ ಲಕ್ಷಣಗಳಾವುವು?

42. ದ್ರೌಪದಿ ಅವಮಾನಕ್ಕೊಳಗಾದ ಮೂರು ಪ್ರಸಂಗಗಳನ್ನು ವಿವರಿಸಿರಿ.

43. ವೀರ, ಮಂತ್ರಿ, ರಾಜ ಮತ್ತು ಯೋಗಿಗಳಿಗೆ ಇರಬೇಕಾದ ಅರ್ಹತೆಗಳೇನು?

**ಆ) ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. (1X4=4)**

44. ಕಣ್ಣು ನೋವು ಶುರುವಾದ ಆರಂಭದಲ್ಲಿ ಬಸಲಿಂಗ ಪಡೆದುಕೊಂಡ ಚಿಕಿತ್ಸೆ ಯಾವ ರೀತಿಯದು?

45. ಕಮಲಾಮೇಡಂಗೆ ಮೂತ್ರ ಪಿಂಡದಲ್ಲಿ ಕಲ್ಲು ಮೂಡಿದ್ದೇಕೆ?

46. ಮುಸುರೆ ಪಾತ್ರೆಗಳು ನೀರು ಪಾಲಾದುದು ಹೇಗೆ? ಅವುಗಳನ್ನು ಮೇಲೆತ್ತಲು ಮಾಡಿದ ಪ್ರಯತ್ನಗಳೇನು?

**ಇ) ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. (1X4=4)**

47. ದುರ್ಗಪ್ಪ ನಿರೂಪಕರ ಬಳಿಗೆ ಬಂದ ಸಂದರ್ಭವನ್ನು ವಿವರಿಸಿ ?

48. ಡ್ರೈವರ್ ಅಬ್ಬಾಸ್ ಮತ್ತು ಕ್ಲೀನರ್ ಕೃಷ್ಣನ ಸಾವಿಗೆ ಕೃಷ್ಣೇಗೌಡರ ಆನೆ ಕಾರಣವೇ ವಿವರಿಸಿ.?

## ಭಾಷಾಭ್ಯಾಸ

**V. ಅ) ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕಕ್ಕೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ. (4X2=8)**

**49**. ಕೆಳಗಿನ ಎರಡು ಪದಗಳಿಗೆ ನಾನಾರ್ಥಗಳನ್ನು ಬರೆಯಿರಿ:- **ತೊರೆ, ಹದ್ದು, ಮುನಿ**

50. ಕೆಳಗಿನ ಎರಡು ಕ್ರಿಯಾಪದಗಳ ಧಾತುರೂಪವನ್ನು ಬರೆಯಿರಿ:- **ನಿಂತರು, ಮಾಡುತ್ತಾನೆ, ಹೊದರು**

51. ಕೆಳಗಿನ ಎರಡು ನುಡಿಗಟ್ಟುಗಳನ್ನು ಸ್ವಂತ ವಾಕ್ಯದಲ್ಲಿ ಬರೆಯಿರಿ:– **ಮೂಗುಮುರಿ. ಕೈಕೊಡು, ಎರಡುಬಗೆ**

52. ಕೆಳಗಿನ ಎರಡು ಪದಗಳಿಗೆ ಗುಣವಾಚಕಗಳನ್ನು ಬರೆಯಿರಿ:– **ದುರ್ಗಂಧ, ಬೆಳ್ಳಿಲೋಟ, ಹಸಿರುಗಂಬಳಿ**

53. ಕೆಳಗಿನ ಎರಡು ಪದಗಳಿಗೆ ವಿಭಕ್ತಿ ಪ್ರತ್ಯಯ ಬರೆಯಿರಿ:– **ಗದ್ಯದೊಳ್, ಬಸ್ಟಾಪಿನಲ್ಲಿ, ಕುದುಪನನ್ನು**

54. ಕೆಳಗಿನ ಎರಡು ಪದಗಳಿಗೆ ನಿಷೇದಾರ್ಥಕ ಪದ ಬರೆಯಿರಿ:– **ಹಾಡುವನು, ನೋಡುವಳು, ತಿಂದನು**

**ಆ) ಯಾವುದಾದರೂ ಒಂದನ್ನು ಕುರಿತು ಪ್ರಬಂಧ ಬರೆಯಿರಿ. (1X4=4)**

55. ಮತದಾನದ ಮಹತ್ವ.

56. ಅರಣ್ಯ ಮತ್ತು ವನ್ಯಜೀವಿಗಳ ಸಂರಕ್ಷಣೆ.

**ಇ). ಯಾವುದಾದರೂ ಒಂದನ್ನು ಕುರಿತು ಪತ್ರ ಬರೆಯಿರಿ. (1X4=4)**

**(ಯಾವುದೇ ಪತ್ರ ಲೇಖನದಲ್ಲಿ ಹೆಸರು, ನಮೂದಿಸಬಾರದು; ಸಂಕೇತಾಕ್ಷರಗಳನ್ನು ಮಾತ್ರ ಬಳಸಬೇಕು. ಉದಾ: ಅ.ಬ.ಕ)**

57. ಉನ್ನತ ವ್ಯಾಸಂಗಕ್ಕಾಗಿ ಸಾಲ ಸೌಲಭ್ಯವನ್ನು ಕೋರಿ ಬ್ಯಾಂಕಿನ ವ್ಯವಸ್ಥಾಪಕರಿಗೆ ಒಂದು ಪತ್ರ ಬರೆಯಿರಿ.

58. ನೀವು ಕೈಗೊಂಡ ಶೈಕ್ಷಣಿಕ ಪ್ರವಾಸ ಕುರಿತು ನಿಮ್ಮ ಗೆಳೆಯ/ಗೆಳತಿಗೆ ಒಂದು ಪತ್ರವನ್ನು ಬರೆಯಿರಿ.